# Andolana

**Date:** 17-03-2021 **Page No:** 5

**Edition:** Mysore **Language:** Kannada

# ಎಸ್‌ಡಿಎಂಐಎಂಡಿಯಲ್ಲಿ ಸ್ಟಾರ್ಟ್-ಅಪ್ ಚರ್ಚಾ

## ಸರಿಯಾದ ಉತ್ಪನ್ನ, ಮಾರುಕಟ್ಟೆ ವಿಧಾನ ಅರ್ಥ ಮಾಡಿಕೊಂಡರೆ ಯಶಸ್ಸು: ಶ್ರೇಯಸ್ ಚಂದ್ರ



ಮೈಸೂರು: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ತನ್ನ ವಾರ್ಷಿಕ ಚಟುವಟಿಕೆಯ ಭಾಗವಾಗಿ 'ಸ್ವಯಂ' ಯೋಜನೆಯಡಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಸಲುವಾಗಿ 'ಸ್ಟಾರ್ಟ್ ಅಪ್‌ಗಳು ಹೇಗೆ ಯಶಸ್ವಿಯಾಗುತ್ತವೆ ಮತ್ತು ಅವು ಏಕೆ ವಿಫಲವಾಗುತ್ತವೆ' ಎಂಬ ವಿಷಯದ ಕುರಿತು 'ಸ್ಟಾರ್ಟ್-ಅಪ್ ಚಾರ್ಚಾ 2021' ಅನ್ನು ವರ್ಚುವಲ್ ಮೂಲಕ ಈಚೆಗೆ ನಡೆಸಿತು.

ಸ್ಟಾರ್ಟ್-ಅಪ್ ಫಂಡಿಂಗ್ ಫ್ಲೋ ಡೈರೆಕ್ಟರ್ ಹಾಗೂ ಭಾರತದ ಕೀರೆಟ್ಸು-ಫೋರಂ ಸಿಇಒ ಶ್ರೇಯಸ್ ಚಂದ್ರ ಮಾತನಾಡಿ, ಸರಿಯಾದ ಉತ್ಪನ್ನ, ಆಲೋಚನೆ ಮೇಲೆ ಗಮನ, ಬಲವಾದ ತಂಡ, ಉತ್ತಮ ಮಾರುಕಟ್ಟೆ ತಂತ್ರ ಮತ್ತು ಮಾರಾಟ ವಿಧಾನ ಅರ್ಥಮಾಡಿಕೊಂಡರೆ ಸ್ಟಾರ್ಟ್- ಅಪ್‌ನಲ್ಲಿ ಯಶಸ್ಸು ಸಾಧಿಸಬಹುದು. ಸ್ಟಾರ್ಟ್ ಅಪ್‌ಗಳ ಬಗ್ಗೆ ಯುವ ಸಮೂಹಕ್ಕೂ ಅರಿವಿದೆ ಮತ್ತು ಸ್ಟಾರ್ಟ್ ಅಪ್ ಸಂಸ್ಕೃತಿಯನ್ನು ಪರಿಚಯಿಸಲು ಸರ್ಕಾರದ ಪ್ರಯತ್ನವೂ ಮಹತ್ತರವಾಗಿದೆ. ಆದರೆ ಪ್ರಮುಖ ಯಶಸ್ಸಿನ ಅಂಶಗಳ ಬಗ್ಗೆ ಮಾಹಿತಿ ಸಿಗದೆ ಇರುವುದು ತೊಡಕಾಗಿದೆ ಎಂದು ಅಭಿಪ್ರಾಯಪಟ್ಟರು.

ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಸೌರಭ್ ಶಾ ಮಾತನಾಡಿ, ಯುವ ಆಕಾಂಕ್ಷಿಗಳನ್ನು ಉದ್ಯಮಿಗಳಾಗಿ ಪರಿವರ್ತಿಸುವುದು ಹೇಗೆ ಮತ್ತು ಅವರನ್ನು ಸಿದ್ಧಪಡಿಸುವ ಬಗೆ ಹೇಗೆ ಎಂಬುದರ ಬಗ್ಗೆ ವಿವರಿಸಿದರು. ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಮಾತನಾಡಿ, ಉದ್ಯಮಶೀಲತೆಗೆ ಸಂಬಂಧಿತ ಚಟುವಟಿಕೆಗಳ ಮಹತ್ವವನ್ನು ತಿಳಿಸಿಕೊಟ್ಟರು. ಎಸ್‌ಡಿಎಂಐಎಂಡಿ ಸಂಶೋಧನಾರ್ಥಿ ಆರ್.ಟಿ. ನಟರಾಜ್, ಪಿಜಿಡಿಎಂ ವಿದ್ಯಾರ್ಥಿ ಆರ್. ಮೇಘನಾ ಮಾತನಾಡಿ ಅಭಿಪ್ರಾಯ ಹಂಚಿಕೊಂಡರು. ಡಾ.ಎಸ್.ಎನ್.ಪ್ರಸಾದ್ ಸ್ವಾಗತಿಸಿದರು. ಎಸ್‌ಡಿಎಂಐಎಂಡಿ ಸಹಾಯಕ ಪ್ರಾಧ್ಯಾಪಕ ಡಾ.ಎಂ.ವಿ.ಸುನಿಲ್ ವಂದನಾರ್ಪಣೆ